**ಪಿ.ಡಬ್ಲ್ಯೂ- 1**

**ದಿನಾಂಕಃ 15-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಶ್ರೀ ಎನ್.ಎಫ್.ಎಂ., ವಾದಿಯರ ಪರ ವಕೀಲರಿಂದಃ**

ಸದರಿ ಪ್ರಕರಣದಲ್ಲಿ ನಾನು 4ನೇ ವಾದಿಯಾಗಿದ್ದು, ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ ಹಾಗೂ ಸದರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಹೆಬ್ಬಟ್ಟಿನ ಗುರುತುಗಳು ನನ್ನವೇ ಆಗಿರುತ್ತವೆ.

ನನ್ನ ದಾವೆಗೆ ಪೂರಕವಾಗಿ

1) ರಿ.ಸ.ನಂ.ನಂಬರ 162/2 ಇದರ 2018-2019 ರ ಪಹಣಿ ಪತ್ರಿಕೆಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-1 ಅಂತಾ ಗುರುತಿಸಲಾಯಿತು.
2) ರಿ.ಸ.ನಂ.ನಂಬರ 163/* ಇದರ 2018-2019 ರ ಪಹಣಿ ಪತ್ರಿಕೆಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-2 ಅಂತಾ ಗುರುತಿಸಲಾಯಿತು.
3) ರಿ.ಸ.ನಂ.ನಂಬರ 241/1 ಇದರ 2018-2019 ರ ಪಹಣಿ ಪತ್ರಿಕೆಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-3 ಅಂತಾ ಗುರುತಿಸಲಾಯಿತು.
4) ರಿ.ಸ.ನಂ.ನಂಬರ 241/2 ಇದರ 2018-2019 ರ ಪಹಣಿ ಪತ್ರಿಕೆಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-4 ಅಂತಾ ಗುರುತಿಸಲಾಯಿತು.
5) ನನ್ನ ತಂದೆಯಾದ ಸಿದ್ದಪ್ಪ ಇವರ ಮರಣ ಪ್ರಮಾಣ ಪತ್ರ ಹಾಜರಪಡಿಸಿದ್ದು ಅದನ್ನು ನಿಪಿ-5 ಅಂತಾ ಗುರುತಿಸಲಾಯಿತು.
6) ಡ ನಂಬರ 2299 ನೇದ್ದರ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-6 ಅಂತಾ ಗುರುತಿಸಲಾಯಿತು.
7) ಡ ನಂಬರ 4549 ನೇದ್ದರ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-7 ಅಂತಾ ಗುರುತಿಸಲಾಯಿತು.

8) ನನ್ನ ಅಣ್ಣನಾದ ರುದ್ರಪ್ಪ ಈತನ ಮರಣ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದನ್ನು ನಿಪಿ-8 ಅಂತಾ ಗುರುತಿಸಲಾಯಿತು.

9) ಡ ನಂಬರ 3092 ನೇದ್ದರ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-9 ಅಂತಾ ಗುರುತಿಸಲಾಯಿತು.

ಕಾರಣ ದಾವೆಯಲ್ಲಿ ಕೋರಿದಂತೆ ಡಿಕ್ರಿಯಾಗಲು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಶ್ರೀ ಎಸ್.ಆರ್.ಹೆಚ್., 8 ರಿಂದ 13 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಶ್ರೀಮತಿ ಕೆ.ಜಿ.ಕೆ., ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ, ಕಾಲಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- **15-02-2024**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.